# ರಸನ್ ಆಲೀಖಾನರ ಮಹಾಭಾಗ್ಯ

**ಸ್ವಾಮಿ ಸತ್ಯೇಶಾನಂದ**

*ಶ್ರೀಮಾತೆಯವರ ವಿಶ್ವವಿಶಾಲ ಮಾತೃಪ್ರೇಮವನ್ನು ಚಿತ್ರಿಸುವ ಈ ಬರಹವನ್ನು ಬಂಗಾಲಿ ಮೂಲದಿಂದ ಕನ್ನಡಕ್ಕೆ ಅನುವಾದಿಸಿರುವ ಸ್ವಾಮಿ ಸತ್ಯೇಶಾನಂದರು ರಾಂಚಿಯಲ್ಲಿರುವ ರಾಮಕೃಷ್ಣ ಮಿಷನ್ ಟಿ.ಬಿ. ಸ್ಯಾನಿಟೋರಿಯಂನಲ್ಲಿ ಸೇವೆ ಸಲ್ಲಿಸುತ್ತಿರುವರು.*

ಜಯರಾಂಬಾಟಿ ಪರಮಪವಿತ್ರ ಪುಣ್ಯತಾಣ. ಅದರ ಬಳಿ ಶಿರೋಮಣಿಪುರ ಎಂಬ ಗ್ರಾಮ. ರಸನ್ ಆಲೀಖಾನ್ ಅಲ್ಲಿಯ ನಿವಾಸಿ. ಅವರು ಶ್ರೀಮಾತೆ ಶಾರದಾದೇವಿಯವರ ಪ್ರೀತಿ, ಮಮತೆಗಳ ಸವಿಕಂಡ ಪುಣ್ಯಾತ್ಮರು. ಶಾರದಾ ಅಂದರೆ ಸಾರವನ್ನು, ಅಮೃತವನ್ನು ನೀಡುವವಳು ಎಂದರ್ಥ. ಅಂಥ ಮಹಾಮಾತೆ ಶ್ರೀ ಶಾರದಾದೇವಿಯವರ ಕೃಪೆ ಪಡೆದ ರಸನ್ ಆಲೀಖಾನರ ಮಹಾ ಭಾಗ್ಯದ ಕಥೆಯನ್ನು ಅವರಿಂದಲೇ ಕೇಳೋಣ :

ನಾನು ಆಗ ೧೩ ಅಥವಾ ೧೪ ವರ್ಷದ ಬಾಲಕ. ನನ್ನ ಚಿಕ್ಕಪ್ಪರಾದ ಮಫೀತಿ ಶೇಖ್ ಹಾಗೂ ಹಾಮೇದಿ ಶೇಖ್ ನನ್ನನ್ನು ಜಯರಾಂಬಾಟಿಗೆ ಕರೆದೊಯ್ದು ಶ್ರೀಮಾತೆಯವರ ದರ್ಶನಭಾಗ್ಯ ಲಭಿಸುವ ಹಾಗೆ ಮಾಡಿದರು. ನನ್ನ ಊರು ಶಿರೋಮಣಿಪುರ. ಅದು ಶಿಹೋರ್ ಗ್ರಾಮದ ಬಳಿ. ನನ್ನ ಚಿಕ್ಕಪ್ಪ ಹಾಗೂ ಉಳಿದ ಆತ್ಮೀಯರ ವಾಸಸ್ಥಾನ ನಮ್ಮ ಹಳ್ಳಿಯ ಸಮೀಪದಲ್ಲೇ ಇರುವ ಪರಮಾನಂದಪುರದಲ್ಲಿ. ಶಿರೋಮಣಿಪುರ ಹಾಗೂ ಪರಮಾನಂದ ಪುರದ ಜನರ ಜೊತೆ ಶ್ರೀಮಾತೆಯವರ ವಿಶೇಷ ಸ್ನೇಹದ ಸಂಪರ್ಕವಿತ್ತು. ಶಿರೋಮಣಿಪುರದ ಅಮ್ಜದ್, ಅಮ್ಜದನ ಪತ್ನಿ ಮತಿಜಾನ್ ಬೀಬಿ ಹಾಗೂ ಅಮ್ಜದನ ತಾಯಿ ಫತೀಮಾ ಬೀಬಿಯವರನ್ನು ಶ್ರೀಮಾತೆಯವರು ಬಹಳ ಪ್ರೀತ್ಯಾದರಗಳಿಂದ ನೋಡುತ್ತಿದ್ದರು. ಹಾಗೆ ನೋಡಿದರೆ ಶ್ರೀಮಾತೆಯವರು ಸ್ವತಃ ತಾವೇ ಅಮ್ಜದನ ಸಂಸಾರವನ್ನು ನಡೆಸುತ್ತಿದ್ದವರು! ಅಮ್ಜದ್ ಹಳ್ಳಿಯಲ್ಲಿ ಇರುತ್ತಲೇ ಇರಲಿಲ್ಲ ಎಂದೇ ಹೇಳಬಹುದು. ಸಂಸಾರದ ಕಡೆ ಗಮನ ಹರಿಸುತ್ತಿರಲಿಲ್ಲ. ಅವನ ಸಂಸಾರದ ಕುಂದುಕೊರತೆಗಳನ್ನೆಲ್ಲ ಶ್ರೀಮಾತೆಯವರೇ ನೀಗಿಸುತ್ತಿದ್ದರು. ಏನಾದರೂ ಕಷ್ಟ ಬಂದರೆ ಸಾಕು, ಅಮ್ಜದನ ತಾಯಿ ಹಾಗೂ ಹೆಂಡತಿ, ಶ್ರೀಮಾತೆಯವರ ಬಳಿ ಹಾಜರ್! ಮಾತೆಯವರಿಗೆ ಅವರ ದುಃಖ, ಕಷ್ಟಗಳನ್ನು ನೋಡಲಾಗುತ್ತಿರಲಿಲ್ಲ. ಶ್ರೀಮಾತೆಯವರು ಅವರಿಗೆ ತಿನ್ನಲು ಹೊಟ್ಟೆತುಂಬ ಬೆಲ್ಲ ಕಡಲೆಪುರಿಯ ಪ್ರಸಾದವನ್ನು ಕೊಟ್ಟು, ಅದರ ಜೊತೆಗೆ ಸ್ನಾನ ಮಾಡಲು, ತಲೆಗೆ ಹಾಕಲು ಎಣ್ಣೆ, ಅಕ್ಕಿ, ಬಟ್ಟೆ ಹಾಗೂ ಇನ್ನಿತರ ದೈನಂದಿನ ಬಳಕೆಯ ಸಾಮಾನುಗಳನ್ನು ಕೈತುಂಬ ಕೊಟ್ಟು ಕಳುಹಿಸುತ್ತಿದ್ದರು.

ಶಿರೋಮಣಿಪುರ ಹಾಗೂ ಪರಮಾನಂದಪುರದ ಜನರು ಮಲ್‌ಬೆರಿ ರೇಶಿಮೆಯ ವ್ಯವಸಾಯ ಮಾಡುತ್ತಿದ್ದರು. ಬ್ರಿಟಿಷರು ಜಮೀನ್ದಾರರ ಮೂಲಕ ಕೃಷಿಕರಿಗೆ ಮುಂಗಡ ಹಣವನ್ನು ಕೊಟ್ಟು ರೇಶಿಮೆಯ ವ್ಯವಸಾಯವನ್ನು ಬಲಾತ್ಕಾರವಾಗಿ ಮಾಡಿಸುತ್ತಿದ್ದರು. ಇದರಿಂದ ಕೃಷಿಕರಿಗೆ ಬಹಳ ಕಷ್ಟವಾಗುತ್ತಿತ್ತು. ಕಾರಣ ಅವರಿಗೆ ತಮ್ಮ ಜಮೀನಿನಲ್ಲಿ ಬೇರೆ ಯಾವ ಫಸಲನ್ನೂ ಬೆಳೆಯಲು ಸಾಧ್ಯ ವಾಗುತ್ತಿರಲಿಲ್ಲ. ಜಮೀನ್ದಾರರ ಹಾಗೂ ಬ್ರಿಟಿಷರ ಭಯದಿಂದ ಹಳ್ಳಿಗಳ ಜನ ಕಂಗಾಲಾಗಿ ಹೋಗಿದ್ದರು. ಈ ಎರಡು ಗ್ರಾಮ ಗಳಲ್ಲಿ ಮುಸಲ್ಮಾನರ ಸಂಖ್ಯೆಯೇ ಅಧಿಕವಾಗಿತ್ತು. ಸರಿಯಾಗಿ ಕೃಷಿಕಾರ್ಯ ಮಾಡಲು ಸಾಧ್ಯವಿಲ್ಲದೇ ಇದ್ದುದರಿಂದ ಅವರು ಬಡತನದ ಬೇಗೆಯಲ್ಲಿ ಬೆಂದುಹೋಗಿದ್ದರು. ಶಿಹೋರ್, ಜಿಬ್ಟಾ, ಜಯರಾಂಬಾಟಿ, ಫುಲುಇ, ಶ್ಯಾಮ್‌ಬಜಾರ್ ಮೊದಲಾದ ಗ್ರಾಮಗಳ ಧನಿಕರು ಹಾಗೂ ಮಧ್ಯಮವರ್ಗದ ಜನರು ಈ ಮುಸಲ್ಮಾನರ ದುರ್ದಶೆಯ ಬಗ್ಗೆ ಎಳ್ಳಷ್ಟೂ ಕಾಳಜಿ ತೋರಿಸು ತ್ತಿರಲಿಲ್ಲ. ಕೇವಲ ಶ್ರೀಮಾತೆ ಮಾತ್ರ ನಮ್ಮ ದುಃಖವನ್ನು ಅರ್ಥ ಮಾಡಿಕೊಂಡು, ನಮ್ಮನ್ನು ಪರಮಪ್ರೀತಿ, ಮಮತೆಗಳಿಂದ ಕಾಣು ತ್ತಿದ್ದರು. ಎಲ್ಲ ರೀತಿಯ ಜಾತಿ, ಕುಲ, ಗೋತ್ರ, ಧರ್ಮದ ಭೇದ ಗಳನ್ನು ಕಿತ್ತೆಸೆದು, ಹೆತ್ತತಾಯಿಯೋಪಾದಿಯಲ್ಲಿ ತಮ್ಮ ಮಡಿಲಲ್ಲಿ ನಮಗೆ ಆಶ್ರಯವನ್ನಿತ್ತಿದ್ದರು.

ಹಾಮೇದಿ ಶೇಖ್, ಮಫೇತಿ ಶೇಖ್ ಹಾಗೂ ರಂಜಾನ್ ಪಠಾಣ್‌ರ ಬಳಿ ಎತ್ತಿನ ಗಾಡಿಗಳಿದ್ದವು. ಆ ಎತ್ತಿನ ಗಾಡಿಗಳನ್ನು ಬಾಡಿಗೆಗಾಗಿ ಉಪಯೋಗಿಸುತ್ತಿದ್ದರು. ವಿಷ್ಣುಪುರಕ್ಕೆ ಹೋಗುವ ಪ್ರಯಾಣಿಕರು ಆ ಬಾಡಿಗೆಯ ಎತ್ತಿನ ಗಾಡಿಗಳಲ್ಲಿ ಪ್ರಯಾಣಿಸು ತ್ತಿದ್ದರು. ಶ್ರೀಮಾತೆ ಹಾಗೂ ಅವರ ನೆಂಟರಿಷ್ಟರನ್ನು ಅವರು ತಮ್ಮ ಎತ್ತಿನ ಗಾಡಿಗಳಲ್ಲಿ ಕೂರಿಸಿಕೊಂಡು ಜಯರಾಂಬಾಟಿಯಿಂದ ಕೋಯಲ್‌ಪಾರಾಕ್ಕೆ ಹಾಗೂ ಕೋಯಲ್‌ಪಾರಾದಿಂದ ಜಯರಾಂ ಬಾಟಿಗೆ ತಲುಪಿಸುತ್ತಿದ್ದರು. ಕೆಲವೊಮ್ಮೆ ಮಾತೆಯವರು ಜಯರಾಂ ಬಾಟಿಯಿಂದ ಕೊಲ್ಕತಾಗೆ ಹೋಗುತ್ತಿದ್ದಾಗ, ವಿಷ್ಣುಪುರದವರೆಗೆ ಆ ಎತ್ತಿನ ಗಾಡಿಗಳಲ್ಲೇ ಪಯಣಿಸುತ್ತಿದ್ದರು. ಹೀಗೆ ಈ ಮುಸಲ್ಮಾನರು ಮಾತೆಯವರಿಗೆ ವಿವಿಧ ರೀತಿಯಲ್ಲಿ ನೆರವಾಗು ತ್ತಿದ್ದರು. ಮಾತೆಯವರ ಹೊಸ ಗುಡಿಸಿಲಿನ ಮನೆಯ ಮಣ್ಣಿನ ಗೋಡೆ ಕಟ್ಟಿಸುವ ಕಾರ್ಯದಲ್ಲೂ ಕೂಡ ಈ ಶಿರೋಮಣಿಪುರ ಹಾಗೂ ಪರಮಾನಂದಪುರದ ಜನರ ಸಂಖ್ಯೆಯೇ ಜಾಸ್ತಿ. ಶಿಹೋರಗ್ರಾಮದ ಸಮೀಪದಲ್ಲಿ ಮಾತೆಯವರ ತಮ್ಮಂದಿರ ಜಮೀನಿನಲ್ಲಿ ಮಫೇತಿ ಶೇಖ್ ಕೃಷಿ ವ್ಯವಸಾಯ ಮಾಡುತ್ತಿದ್ದನು. ಹಾಮೇದಿ ಶೇಖರ ಪತ್ನಿ ನಫಿಜಾನ್ ಬೀಬಿ ಹಾಗೂ ಮಫೇತಿಯ ಪತ್ನಿ ಮಜಿರನ್ ಬೀಬಿಯವರನ್ನೂ ಕೂಡ ಶ್ರೀಮಾತೆಯವರು

ಪ್ರೀತಿಯಿಂದ ಕಾಣುತ್ತಿದ್ದರು. ಅವರು ಆಗಾಗ ಶ್ರೀಮಾತೆಯವರ ಬಳಿ ಹೋಗುತ್ತಿದ್ದರು. ಶ್ರೀಮಾತೆ ಅವರುಗಳನ್ನು ಪ್ರೀತಿಯಿಂದ "ಬೀಬಿ ಬಉ" ಅಂದರೆ "ಬೀಬಿ ಸೊಸೆ"ಯೆಂದು ಕರೆಯುತ್ತಿದ್ದರು. ಶ್ರೀಮಾತೆಯವರು ಅವರುಗಳಿಗೆ ಹೊಟ್ಟೆ ತುಂಬಾ ಊಣಿಸುತ್ತಿದ್ದರು ಹಾಗೂ ಅವರ ಸುಖದುಃಖದ ಕಥೆಯಲ್ಲಿ ಭಾಗಿಯಾಗುತ್ತಿದ್ದರು.

೧೯೧೫ರಲ್ಲಿ ಶ್ರೀಮಾತೆಯವರ ಹೊಸಮನೆಯ ನಿರ್ಮಾಣ ಕಾರ್ಯ ಆರಂಭವಾದಾಗ ಶರತ್ ಮಹಾರಾಜರು ಜಯರಾಂಬಾಟಿಯಲ್ಲಿ ಒಂದು ತಿಂಗಳ ಕಾಲ ತಂಗಿದ್ದರು. ಆಗ ಅವರು ಶಿರೋಮಣಿಪುರ ಹಾಗೂ ಪರಮಾನಂದಪುರಕ್ಕೂ ಭೇಟಿ ನೀಡಿದ್ದರು. ನಾನು ಶರತ್ ಮಹಾರಾಜರನ್ನೂ ನೋಡಿದ್ದೇನೆ. ಈ ಗೃಹ ನಿರ್ಮಾಣದ ಸಮಯದಲ್ಲಿಯೇ ಶಿರೋಮಣಿಪುರ ಹಾಗೂ ಪರಮಾನಂದಪುರದ ಜನತೆ ಶ್ರೀಮಾತೆಯವರ ನಿಕಟ ಸಂಪರ್ಕಕ್ಕೆ ಬಂದದ್ದು. ಅಲ್ಲಿಯ ಹಿಂದೂಗಳು ಜಾತಿಮತದ ಸಂಕೀರ್ಣತೆಗೆ ಒಳಗಾಗಿ ಮುಸಲ್ಮಾನರನ್ನು ತಮ್ಮ ಮನೆಗಳ ಒಳಗೆ ಕಾಲಿಡುವುದನ್ನೂ ನಿಷೇಧಿಸಿದ್ದರು. ಶ್ರೀಮಾತೆಯವರ ಹೊಸ ಗೃಹ ನಿರ್ಮಾಣ ಕಾರ್ಯದಲ್ಲಿ ಅನೇಕ ಮುಸಲ್ಮಾನ ಕೆಲಸಗಾರರು ಕೆಲಸ ಮಾಡುತ್ತಿದ್ದರು. ಆದ್ದರಿಂದ ಅಲ್ಲಿಯ ಕೆಲವು ಸಂಪ್ರದಾಯಸ್ಥ ಜನರು ಹಾಗೂ ಮಾತೆಯವರ ಸಂಬಂಧಿಕರೇ ಮಾತೆಯವರನ್ನು ಟೀಕೆ ಮಾಡಲು ಶುರುಮಾಡಿದರು. ಶ್ರೀಮಾತೆಯವರನ್ನು "ಮ್ಲೇಚ್ಛ" ಎಂದು ಕರೆಯಲೂ ಸಹ ಅವರು ಹಿಂಜರಿಯಲಿಲ್ಲ. ಶ್ರೀಮಾತೆ ಲಜ್ಜಾಶೀಲರಾಗಿದ್ದರೆಂಬುದು ಸತ್ಯ. ಅವರು ಜನರ ಮುಂದಿರುವಾಗ ಯಾವಾಗಲೂ ಬಟ್ಟೆಯಿಂದ ಸಂಪೂರ್ಣ ಆವೃತರಾಗಿರುತ್ತಿದ್ದರು. ಅವರು ಬಹಳ ಮೆದುವಾಗಿ ಸಣ್ಣ ಧ್ವನಿಯಲ್ಲಿಯೇ ಮಾತನಾಡುತ್ತಿದ್ದರು. ಆದರೆ ಅವರು ನಿರ್ಭಯತೆಯಿಂದ ಅನ್ಯಾಯವನ್ನು ಪ್ರತಿಭಟಿಸುತ್ತಿದ್ದರು. ದಬ್ಬಾಳಿಕೆ, ಅನ್ಯಾಯವನ್ನು ಅವರು ಎಂದೂ ಸಮರ್ಥಿಸುತ್ತಿರಲಿಲ್ಲ. ಗ್ರಾಮದ ಜನರ ಒತ್ತಡದಿಂದ ಮಾತೆಯವರ ಗೃಹನಿರ್ಮಾಣ ಕಾರ್ಯ ಕೆಲವು ದಿನಗಳ ಮಟ್ಟಿಗೆ ಸ್ಥಗಿತವಾಗಿತ್ತು. ಅನಂತರ ತಿಳಿದುಬಂತು—ಶ್ರೀಮಾತೆಯವರು ನಮ್ಮ ಮೂಲಕವೇ ಆ ಕೆಲಸ ಪೂರೈಸುತ್ತೇನೆಂದು ದೃಢಸಂಕಲ್ಪ ಮಾಡಿದ್ದರೆಂದು. ಅಂತೂ ಕೊನೆಗೆ ಶ್ರೀಮಾತೆಯವರ ದೃಢಸಂಕಲ್ಪದ ಮುಂದೆ ಕಟ್ಟಾ ಸಂಪ್ರದಾಯವಾದಿಗಳು ಸೋಲೊಪ್ಪಿಕೊಳ್ಳಬೇಕಾಯಿತು. ಈ ಘಟನೆಯಿಂದಾಗಿ ಶ್ರೀಮಾತೆ ಹಾಗೂ ನಮ್ಮಗಳ ಸಂಬಂಧ ಮತ್ತೂ ಗಾಢವಾಯಿತು.

ಜಯರಾಂಬಾಟಿಯಲ್ಲಿ ಆಗ ಯಾವ ವಸ್ತುವೂ ದೊರಕುತ್ತಿರಲಿಲ್ಲ. ಬದನ್‌ಗಂಜ್ ಹಾಗೂ ಕೋತುಲ್‌ಪುರದಲ್ಲಿ ಸಂತೆ ಸೇರುತ್ತಿತ್ತು. ಶಿರೋಮಣಿಪುರದಲ್ಲಿ ಒಂದು ಚಿಕ್ಕ ಸಂತೆ ಸೇರುತ್ತಿತ್ತು. ಆ ಗ್ರಾಮದಲ್ಲಿ ಎಲ್ಲರೂ ಅಲ್ಪ ಸ್ವಲ್ಪ ತರಕಾರಿ ಬೆಳೆಸುತ್ತಿದ್ದರು. ಮಥೇತಿ ಚಿಕ್ಕಪ್ಪ ತಮ್ಮ ಹೊಲದಲ್ಲಿ ಬೆಳೆದ ಸೋರೆಕಾಯಿ, ಕುಂಬಳಕಾಯಿ, ನುಗ್ಗೇಕಾಯಿ ಮುಂತಾದ ತರಕಾರಿಗಳನ್ನು ತೆಗೆದುಕೊಂಡು ಶ್ರೀಮಾತೆಯವರ ಬಳಿಗೆ ಹೋಗುತ್ತಿದ್ದರು. ಅವರು ಒಮ್ಮೆ ಹೇಳಿದರು, 'ಶ್ರೀಮಾತೆಯವರು ಸಾಮಾನ್ಯ ಮನುಷ್ಯರಲ್ಲ,



ಖಂಡಿತವಾಗಿಯೂ ಬಹು ದೊಡ್ಡ ಪೀರ್-ದರ್‌ವೇಶ್ (ಅಂದರೆ ದೊಡ್ಡ ಸಂತ-ಮಹಾತ್ಮರು) ಆಗಿರಬೇಕು.'

ನಾನು ಒಮ್ಮೆ ತರಕಾರಿ ತೆಗೆದುಕೊಂಡು ಶ್ರೀಮಾತೆಯವರ ಗೃಹಕ್ಕೆ ಹೋಗಿ ನೋಡಿದೆ, ಮಾತೆ ಪೂಜೆ ಮಾಡುತ್ತಿದ್ದರು. ನಾನು ಯಾವಾಗಲೂ ಶ್ರೀಮಾತೆಯವರ ಮನೆಗೆ ಹೋಗಿ ಬಂದು ಮಾಡುತ್ತಿದ್ದುದರಿಂದ ನನಗೆ ಅಲ್ಲಿ ಯಾವ ಸಂಕೋಚ, ಹೆದರಿಕೆಯೂ ಆಗುತ್ತಿರಲಿಲ್ಲ. ನಾನು ಅಲ್ಲಿಗೆ ಹೋಗಿ ಮಾತೆಯವರನ್ನು ಕರೆದೆ 'ಅಮ್ಮಾ, ತರಕಾರಿ ತಂದಿದ್ದೇನೆ' ಎಂದು. ನನ್ನ ಕೂಗು ಕೇಳಿ ಒಬ್ಬ ಹೆಂಗಸು ಹೇಳಿದಳು, 'ಸ್ವಲ್ಪ ತಡೆ, ಮಾತೆಯವರು ಪೂಜೆ ಮಾಡುತ್ತಿದ್ದಾರೆ' ಎಂದು. ನಾನು ದೂರದಿಂದಲೇ ನೋಡುತ್ತಿದ್ದೆ, ಮಾತೆ ತಮ್ಮ ಪೂಜೆಯ ಆಸನದ ಮೇಲೆ ಕುಳಿತು ಪೂಜೆ ಮಾಡುತ್ತಿದ್ದರು. ನಾನು ಅಂಗಣದ ಒಂದು ಮೂಲೆಯಲ್ಲಿ ತರಕಾರಿಯನ್ನು ಇಟ್ಟು, ಅಲ್ಲೇ ನಿಂತಿದ್ದೆ. ಹಠಾತ್ ಮಾತೆಯವರ ಬಳಿ ದೃಷ್ಟಿ ಹಾಯಿಸಿದೆ. ಏನಾಶ್ಚರ್ಯ! ಮಾತೆಯವರು ಆಸನದ ಮೇಲೆ ಕುಳಿತಿಲ್ಲ. ನೆಲದ ಮೇಲಿರುವ ಆಸನದಿಂದ ಕೆಲವು ಅಡಿ ಮೇಲೆ ಕುಳಿತು ಪೂಜೆ ಮಾಡುತ್ತಿದ್ದಾರೆ. ಶ್ರೀಮಾತೆಯವರು ಅದೇ ರೀತಿ ಕುಳಿತಿದ್ದಾರೆ, ಶೂನ್ಯದಲ್ಲಿ, ಅವರ ಆಸನ ಮಾತ್ರ ನೆಲದ ಮೇಲೆ ಇದೆ. ಇದೇನು ಭ್ರಾಂತಿಯೋ ಅಲ್ಲವೋ ಎಂದುಕೊಂಡು ಕಣ್ಣುಜ್ಜಿ ಮತ್ತೊಮ್ಮೆ ನೋಡಿದೆ. ಪುನಃ ಅದೇ ದೃಶ್ಯ! ಮೂರ್ಖನಂತೆ, ಇನ್ನೇನು ಸಾಧು ಬ್ರಹ್ಮಚಾರಿಗಳನ್ನು ಕರೆಯಬೇಕೆನ್ನುವಷ್ಟರಲ್ಲಿ, ಪುನಃ ಮಾತೆ ನೆಲದ ಮೇಲೆ, ಆಸನದ ಮೇಲೆಯೇ ಕುಳಿತಿದ್ದುದನ್ನು ಕಂಡೆ. ಪೂಜೆ ಮುಗಿಸಿ ಮಾತೆಯವರು ಹೊರಬಂದಾಗ ಅವರಿಗೆ ಪ್ರಣಾಮ ಸಲ್ಲಿಸಿದೆ. ಆದರೆ ಅಂದು ಪ್ರಣಾಮ ಮಾಡುವಾಗ ನನಗೆ ಬಹಳ ಭಯವಾಗಿತ್ತು. ಒಬ್ಬ ಮಹಿಳೆ ಶ್ರೀಮಾತೆಯವರ

ಆದೇಶದಂತೆ ನನಗೆ ಬೆಲ್ಲ, ಕಡಲೆಪುರಿ, ತಲೆಗೆ ಹಾಕುವ ಎಣ್ಣೆ ಕೊಟ್ಟಳು. ಅವನ್ನೆಲ್ಲ ತೆಗೆದುಕೊಂಡು ನಾನು ಮಾತೆಯವರಿಂದ ಬೀಳ್ಕೊಂಡೆ. ಆದರೆ ಆ ದೃಶ್ಯದ ಬಗ್ಗೆ ಮಾತೆಯವರ ಬಳಿ ವಿಚಾರಿಸುವ ಧೈರ್ಯವೇ ಉಂಟಾಗಲಿಲ್ಲ.

ಮುಸಲ್ಮಾನ ಪುರುಷರು ಯಾವ ರೀತಿ ಮಾತೆಯ ಬಳಿ ಆತ್ಮೀಯರಾಗಿದ್ದರೋ, ಅದೇ ರೀತಿ ಮುಸಲ್ಮಾನ ಸ್ತ್ರೀಯರೂ ಕೂಡ ಮಾತೆಯವರ ಬಳಿ ನಿಸ್ಸಂಕೋಚವಾಗಿ ಹೋಗಿಬಂದು ಮಾಡುತ್ತಿದ್ದರು. ಶಿರೋಮಣಿಪುರದ ಕೆಲವು ಮುಸಲ್ಮಾನ ಹೆಂಗಸರು ಹಣ್ಣು, ತರಕಾರಿ ಮಾರಾಟ ಮಾಡಲು ಜಯರಾಂ ಬಾಟಿಗೆ ಹೋಗುತ್ತಿದ್ದರು. ಅವರಲ್ಲಿ ಒಬ್ಬಳ ಹೆಸರು ಸಬೀನಾ ಬೀಬಿ. ಆಕೆಗೆ ವಯಸ್ಸಾಗಿತ್ತು. ಆಕೆ ಯಾವಾಗಲೂ ಮಾತೆಯ ಬಳಿ ಹೋಗುತ್ತಿದ್ದಳು. ಆಕೆ ಕೋತುಲ್‌ಪುರದಿಂದ ಮಾವಿನಹಣ್ಣು ಹಾಗೂ ಹಲಸಿನಹಣ್ಣನ್ನು ತಂದು ಜಯರಾಂಬಾಟಿಯಲ್ಲಿ ಮಾರಾಟಮಾಡುತ್ತಿದ್ದಳು. ಶ್ರೀಮಾತೆಯವರ ತಾಯಿ ಶ್ಯಾಮಾಸುಂದರಿ ದೇವಿಯವರೂ ಸಹ ಸಬೀನಾ ಬೀಬಿಯನ್ನು ಬಹಳ ಪ್ರೀತಿಸುತ್ತಿದ್ದರು. ಶ್ರೀಮಾತೆ ಆಕೆಯನ್ನು ಪ್ರೀತಿಯಿಂದ 'ಚಿಕ್ಕಮ್ಮ' ಎಂದು ಕರೆಯುತ್ತಿದ್ದರು.

ಆಗಿನ ಕಾಲದಲ್ಲಿ ಶಿರೋಮಣಿಪುರ - ಶಿಹೋರ್ ಗ್ರಾಮಗಳಲ್ಲಿ ಬಹಳ ಖರ್ಜೂರದ ಮರಗಳಿದ್ದವು. ಅವುಗಳಿಂದ ಖರ್ಜೂರದ ರಸವನ್ನು ಸಂಗ್ರಹಿಸಿ ಖರ್ಜೂರದ ಬೆಲ್ಲವನ್ನು ತಯಾರಿಸುತ್ತಿದ್ದೆವು. ಶಹಜಹಾನ್ ಖಾನ್, ಮಜಿರ್ ಖಾನ್, ಸಾದಿಕ್ ಅಲಿ, ರಫಿಮಿಯಾ ಮೊದಲಾದವರು ಈ ಖರ್ಜೂರದ ವ್ಯಾಪಾರ ಮಾಡುತ್ತಿದ್ದರು. ಕೋತುಲ್‌ಪುರ್, ಬದನ್‌ಗಂಜ್, ಕಾಮಾರ್‌ಪುಕೂರ್, ಗೋಘಾಟ್ ಮುಂತಾದ ಸ್ಥಳಗಳಲ್ಲಿ ಈ ಖರ್ಜೂರದ ಬೆಲ್ಲದ ಮಾರಾಟ ಮಾಡುತ್ತಿದ್ದರು. ಇದೇ ಅವರ ಜೀವನ ನಿರ್ವಹಣೆಯ ಮುಖ್ಯ ಕಸುಬು. ನಾವೂ ಸಹ ಈ ವ್ಯಾಪಾರವನ್ನು ಮಾಡುತ್ತಿದ್ದೆವು. ನಾನು ಬಹಳ ಸಲ ಈ ಖರ್ಜೂರದ ರಸ ಹಾಗೂ ಬೆಲ್ಲವನ್ನು ಶ್ರೀಮಾತೆಯವರಿಗೆ ಕೊಟ್ಟಿದ್ದೇನೆ. ಶ್ರೀಮಾತೆಯವರು ಖರ್ಜೂರದ ರಸ ಕುಡಿಯಲು ಹಾಗೂ ಖರ್ಜೂರದ ಬೆಲ್ಲವನ್ನು ತಿನ್ನಲು ಬಹಳ ಇಷ್ಟಪಡುತ್ತಿದ್ದರು. ಶ್ರೀಮಾತೆಯವರು ಇದಕ್ಕಾಗಿ ನನಗೆ ಹಣ ಕೊಡುತ್ತಿದ್ದರು. ಹಣ ಸ್ವೀಕರಿಸಲು ನಾನು ಹಿಂಜರಿಯುತ್ತಿದ್ದಾಗ ಶ್ರೀಮಾತೆಯವರು ಹೇಳುತ್ತಿದ್ದರು: "ಮಗು, ನೀನು ಹಣ ಸ್ವೀಕರಿಸಬೇಕು. ಇದನ್ನು ನೀನು ಬಹಳ ಪರಿಶ್ರಮವಹಿಸಿ ತಯಾರುಮಾಡಿ ತಂದಿರುವೆ." ಈ ರೀತಿ ಹಣದ ಜೊತೆಗೆ ಶ್ರೀಮಾತೆಯವರು ತುಂಬ ಪ್ರಸಾದ, ಸಿಹಿತಿಂಡಿ ಇತ್ಯಾದಿಗಳನ್ನು ನನಗೆ ಕೊಡುತ್ತಿದ್ದರು.

ಶಿರೋಮಣಿಪುರದಲ್ಲಿ ದುದು ಫಕೀರ ಮತ್ತು ಸಲೀಮ್ ಫಕೀರ ಎಂಬ ಸಂತರಿದ್ದರು. ಅವರೂ ಸಹ ಶ್ರೀಮಾತೆಯವರ ಬಳಿಗೆ ಹೋಗುತ್ತಿದ್ದರು. ಶ್ರೀಮಾತೆಯವರು ಅವರನ್ನು ಬಹಳ ಪ್ರೀತಿ, ವಿಶ್ವಾಸ, ಶ್ರದ್ಧೆಯಿಂದ ಕಾಣುತ್ತಿದ್ದರು. ಶ್ರೀಮಾತೆಯವರು ಶಿರೋಮಣಿಪುರದ ಪೀರರ ದರ್ಗಾದಲ್ಲಿ ಹರಕೆ ಮಾಡಿಕೊಳ್ಳುತ್ತಿದ್ದರು. ಹಾಮೇದಿ ಚಿಕ್ಕಪ್ಪ ಹಾಗೂ ಮಫೇತಿ ಚಿಕ್ಕಪ್ಪ ಹೇಳುತ್ತಿದ್ದರು : "ಶ್ರೀಮಾತೆಯವರದು ಎಂಥಾ ಭಕ್ತಿ-ವಿಶ್ವಾಸ! ನಮ್ಮ ಹಬ್ಬ-ಹರಿದಿನಗಳಲ್ಲಿ ಶ್ರೀಮಾತೆಯವರು ಹರಕೆ ಮಾಡಿಸುತ್ತಾರೆ ಹಾಗೂ ನೈವೇದ್ಯ ಅರ್ಪಿಸುತ್ತಾರೆ." ಮಫೇತಿ ಚಿಕ್ಕಪ್ಪ ಒಮ್ಮೆ ಶ್ರೀಮಾತೆಯವರನ್ನು ಕೇಳಿದರು: "ಅಮ್ಮಾ, ನೀವೋ ಹಿಂದೂಗಳು. ಆದರೂ ಸಹ ನೀವು ಏಕೆ ನಮ್ಮ ಹಬ್ಬ-ಹರಿದಿನಗಳಲ್ಲಿ ನಮ್ಮ ದೇವರಿಗೆ, ಪೀರರಿಗೆ ಕಾಣಿಕೆ, ಗೌರವ ಸಲ್ಲಿಸುತ್ತೀರಿ?" ಅದಕ್ಕೆ ಉತ್ತರವಾಗಿ ಶ್ರೀಮಾತೆಯವರು "ಮಗು, ಠಾಕೂರ್ (ಶ್ರೀರಾಮಕೃಷ್ಣರು) ಬೇರೆಯಲ್ಲ, ನಿಮ್ಮ ದೇವರು ಬೇರೆಯಲ್ಲ... ಎಲ್ಲ ದೇವರುಗಳೂ ಒಂದೇ. ಮಗು, ನಿಮಗೆಲ್ಲ ಗೊತ್ತು ಠಾಕೂರರು ಇಸ್ಲಾಂ ಧರ್ಮವನ್ನೂ ಅನುಸರಿಸಿ ಸಾಧನೆ ಮಾಡಿದ್ದರು. ಆಗ ಅವರು ಮುಸಲ್ಮಾನರ ರೀತಿಯಲ್ಲೇ ನಮಾಜ್ ಮಾಡುತ್ತಿದ್ದರು. ಎಲ್ಲರೂ ಒಂದೇ, ಮಗು. ದೇವನೊಬ್ಬನೇ,ಆದರೆ ಕೇವಲ ಆತನ ನಾಮಗಳಲ್ಲಿ ಮಾತ್ರ ಭಿನ್ನತೆ ಇದೆ. ದೇವನೊಬ್ಬ, ನಾಮ ಹಲವು" ಎನ್ನುತ್ತಿದ್ದರು. ಮಫೇತಿ ಚಾಚಾ ಹಾಗೂ ನಮ್ಮೆಲ್ಲರಲ್ಲೂ ಶ್ರೀಮಾತೆಯವರದ್ದು ಅಗಾಧ ವಿಶ್ವಾಸ ಹಾಗೂ ಪ್ರೀತಿ.

ಒಮ್ಮೆ ಶ್ರೀ ಮಾತೃಮಂದಿರಕ್ಕೆ (ಜಯರಾಂಬಾಟಿಯ ಶ್ರೀಮಾತೆಯವರ ದೇವಸ್ಥಾನ) ಸಿಡಿಲು ಬಡಿಯಿತು. ಕಿಶೋರೀ ಮಹಾರಾಜ್ (ಸ್ವಾಮಿ ಪರಮೇಶ್ವರಾನಂದಜಿ) ಮಫೇತಿ ಚಿಕ್ಕಪ್ಪನವರಿಗೆ ಹೇಳಿದರು: "ಅರೇ ಮಫೇತಿ, ಮಾತೆಯವರ ಮಂದಿರಕ್ಕೆ ಸಿಡಿಲು ಬಡೆದಿದೆ! ನೀನು ಒಮ್ಮೆ ಆಜಾನ್ (ಪ್ರಾರ್ಥನೆ) ಮಾಡು!" ಮಹಾರಾಜರ ಆದೇಶದಂತೆ ಮಫೇತಿ ಚಿಕ್ಕಪ್ಪ ಮಾತೃಮಂದಿರದ ಬಳಿ ಆಜಾನ್ ಸಲ್ಲಿಸಿದರು. ಕಿಶೋರೀ ಮಹಾರಾಜ್ ಶ್ರೀಮಾತೆಯವರ ಪ್ರೀತಿಯ ಸಂತಾನ. ಆದುದರಿಂದಲೇ ಅವರೆಲ್ಲ ಶ್ರೀಮಾತೆಯವರಂತೆ ವಿಶಾಲ, ಉದಾರ ಧರ್ಮಾವಲಂಬಿ. ನಾವು ಶ್ರೀ ಠಾಕೂರ್ ಹಾಗೂ ಶ್ರೀಮಾತೆಯವರನ್ನು ನಮ್ಮ ಪೀರ್-ಪೈಗಂಬರರ ರೂಪವೆಂದೇ ನೋಡುತ್ತೇವೆ.

ಇಲ್ಲಿಯವರೆಗೂ ನಾವು ರಸನ್ ಆಲೀ ಖಾನರಿಂದಲೇ ಶ್ರೀಮಾತೆ ಸಾರದಾದೇವಿಯವರ ಅಪೂರ್ವ ಪ್ರೀತಿ, ಅನುಕಂಪೆಯ ವರ್ಣನೆ ಕೇಳಿದೆವು. ಧನ್ಯ ರಸನ್ ಆಲೀಖಾನ್! ಧನ್ಯ ಹಾಮೇದಿ ಶೇಖ್! ಧನ್ಯ ಮಫೇತಿ ಶೇಖ್! ಎಂಥಾ ಶ್ರದ್ಧಾಭಕ್ತಿ ಈ ಮುಸಲ್ಮಾನ ಭಕ್ತರದ್ದು! ಇವರುಗಳು ಶ್ರೀರಾಮಕೃಷ್ಣ ಶಾರದಾದೇವಿಯವರನ್ನು ಸಾಕ್ಷಾತ್ ಈಶದೂತರೆಂದೇ ಗೌರವಿಸಿ, ಆದರಿಸುತ್ತಿದ್ದರು. ಧರ್ಮದ ಹೆಸರಿನಲ್ಲಿ ರಕ್ತದ ಕಾಲುವೆಯೇ ಹರಿಯುತ್ತಿರುವ ಈ ಸಮಯದಲ್ಲಿ ಶ್ರೀಮಾತೆ ಶಾರದಾದೇವಿಯವರ ದಿವ್ಯಜೀವನ ಚರಿತೆಯ ಮನನ, ಧ್ಯಾನವೇ ಜನಮನಗಳ ದುರಿತ, ದುಮ್ಮಾನ, ದುಗುಡಗಳನ್ನು ದೂರಮಾಡುವ ಸಿದ್ಧೌಷಧ. ಇಸ್ಲಾಂ ಧರ್ಮದಲ್ಲಿ ಜನ್ಮವೆತ್ತಿ ಶ್ರೀಮಾತೆ ಶಾರದಾದೇವಿಯವರ ಕರುಣಾಮೃತ ಸವಿದು, ಶ್ರೀರಾಮಕೃಷ್ಣ-ಶ್ರೀಮಾತೆಯವರಲ್ಲಿ ತಮ್ಮ ಆದರ್ಶವನ್ನು ಕಂಡ ರಸನ್ ಆಲೀ ಖಾನ್ ಹಾಗೂ ಅವರ ಕುಟುಂಬದವರು ನಿಜಕ್ಕೂ ಧನ್ಯರು, ಭಾಗ್ಯವಂತರು!

✦